

**ರಾಕೇಶ್ ಮಯ್ಯ**
**ಉದಯದ ‘ಅವಳು’ನ ಸಿದ್ದಾರ್ಥ**

# ಬಯಸಿದ್ದಕ್ಕಿಂತ ಹೆಚ್ಚಿನದು ದಕ್ಕಿದೆ

★ *ಸಿದ್ಧಾರ್ಥ ಏಕೆ ಅಷ್ಟು ದಡ್ಡ? ಹೇಗೆನಿಸುತ್ತಿದೆ ಪಾತ್ರ?*

ತುಂಬ ಸರಳ ಹಾಗೂ ಮೃದು ಸ್ವಭಾವದ ಯುವಕ. ಸಿದ್ದಾರ್ಥನಿಗೆ ದೊಡ್ಡ ಮಹಾತ್ವಕಾಂಕ್ಷೆ ಇಲ್ಲ. ಒಬ್ಬ ಸಾಮಾನ್ಯ ಯುವಕನ ತುಮುಲಗಳು ಅವನಲ್ಲಿಯೂ ಇವೆ. ತನ್ನನ್ನು ತಾನು ದೊಡ್ಡದಾಗಿ ಬಿಂಬಿಸಿಕೊಳ್ಳಬೇಕು. ಅವಕಾಶವನ್ನು ತನಗಾಗಿ ಬಳಸಿಕೊಳ್ಳಬೇಕು ಎಂಬ ಸ್ವಾರ್ಥ ರಹಿತ ವ್ಯಕ್ತಿ. ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದ ಅವನು ಬೇರೆಯವರ ದ್ವೇಷ ಸಾಧನೆಗೆ ಕೆಲಸ ಕಳೆದುಕೊಳ್ಳುತ್ತಾನೆ.

ನವಿರಾದ ಪ್ರೇಮ ಕಥೆ. ಅನೇಕ ತಿರುವುಗಳಿವೆ. ಶ್ವೇತಾಳನ್ನು ಪ್ರೀತಿಸಿ ಮದುವೆಯಾಗಿತ್ತಾನೆ. ಬಾಲ್ಯದಲ್ಲೇ ಬೇರೆಯವರು ನನ್ನನ್ನು ಸಾಕಿದ್ದಾರೆ. ಆ ಸತ್ಯ ನನಗೆ ಗೊತ್ತಿಲ್ಲ. ಸ್ವಂತ ತಂದೆ ಬೇರೆ ಮದುವೆಯಾಗಿದ್ದಾರೆ. ನಾನು ಮದುವೆಯಾದ ಹುಡುಗಿಯ ಅಕ್ಕನನ್ನು ನನ್ನ ತಂದೆ ಎರಡನೇ ಮದುವೆಯಾಗಿದ್ದಾರೆ. ನನ್ನನ್ನು ಸೋನಿಯಾ ಎಂಬ ಹುಡುಗಿ ಪ್ರೀತಿಸುತ್ತಿದ್ದಾಳೆ. ಹೇಗಾದರೂ ಮಾಡಿ ನನ್ನನ್ನು ಪಡೆಯಬೇಕು ಎನ್ನುವ ಉದ್ದೇಶ ಆಕೆಯದು. ಅದೇ ಕಾರಣಕ್ಕೆ ನಾನಾ ತೊಂದರೆಗಳನ್ನು ಕೊಡುತ್ತಾಳೆ. ಅವಳ ಕಾಟಗಳನ್ನು ಸಹಿಸಿಕೊಳ್ಳುತ್ತೇನೆಯೇ ವಿನಃ ಪ್ರೀತಿಸುವ ಮನಸ್ಸು ಮಾಡುವುದಿಲ್ಲ. ಕರುಣಾಜನಕ ಕುತೂಹಲ ಕಥೆಯಲ್ಲಿ ನನ್ನ ಪಾತ್ರ ಸಾಗುತ್ತಿದೆ.

★ *ಬಣ್ಣ ಹಚ್ಚಿದ್ದು ಹೇಗೆ?*

ನನಗೆ ಮನರಂಜನಾ ಮಾಧ್ಯಮದಲ್ಲಿ ಕೆಲಸ ಮಾಡುವ ಆಸಕ್ತಿ ಮೊದಲಿನಿಂದಲೂ ಇತ್ತು. ಇದಕ್ಕಾಗಿ ಬೇರೆ ಪ್ರಯತ್ನವನ್ನು ಮಾಡಲಿಲ್ಲ. ಎಂಬಿಎ ಓದಿ ಹೊರ ಬರುತ್ತಿದ್ದಂತೆ ಬಿ.ಸುರೇಶ್ ಅವರು ‘ಪ್ರೀತಿ ಪ್ರೇಮದಲ್ಲಿ’ ನಟಿಸುವಂತೆ ಹೇಳಿದರು. ನಟನೆ ಎಂದರೆ ನನಗೆ ಗೊತ್ತಿರಲಿಲ್ಲ. ನಾನು ಹಿಂದೆ ಮುಂದೆ ನೋಡಿದೆ. ಆದರೆ ಅವರು ನೀನು ಮಾಡುತ್ತೀಯಾ ಮಾಡು ಎಂದು ಹುರಿದುಂಬಿಸಿದರು. ಆಗ ನಾನು ‘ನನಗೆ ಏನು? ಎಂಥ? ಅನ್ನುವುದು ಗೊತ್ತಿಲ್ಲ. ನೀವು ಹೇಳಿಕೊಟ್ಟಂತೆ ಮಾಡುತ್ತೇನೆ’ ಎಂಬ ಪೂರ್ವ ಷರತ್ತಿನಂತೆ ನಟಿಸಲು ಒಪ್ಪಿದೆ. ಹೀಗೆ ನನ್ನ ಪಯಣ ಆರಂಭವಾಯಿತು. ಮಧ್ಯದಲ್ಲಿ ಐಟಿ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿದೆ. ‘ಲವಲವಿಕೆ’ಗೆ ಆಡಿಷನ್ ಕೊಟ್ಟಿದ್ದೆ. ಅಲ್ಲಿಂದ ನನಗೆ ಕರೆ ಬರುವ ಹೊತ್ತಿಗೆ ಆರು ತಿಂಗಳು ಕಳೆದಿದ್ದವು. ಕಂಪೆನಿ ಉದ್ಯೋಗ ಬಿಟ್ಟು ಬಣ್ಣ ಹಚ್ಚಿದೆ. ಅದರ ಬೆನ್ನಿಗೆ ‘ನಿಹಾರಿಕಾ’ದಲ್ಲಿಯೂ ನಟಿಸಿದೆ. ಮತ್ತೆ ಸ್ವಲ್ಪ ಬಿಡುವು ಸಿಕ್ಕಿತು. ದಿನಪತ್ರಿಕೆಯೊಂದಕ್ಕೆ ಫೋಟೋಪತ್ರಕರ್ತನಾಗಿ ಕೆಲಸ ಮಾಡಿದೆ. ಮತ್ತೆ ಬಣ್ಣದ ಮೋಡಿ ಕೈಬೀಸಿದೆ.

ಶೀಘ್ರದಲ್ಲಿ ನಾನು ನಟಿಸಿದ ‘96’ ಸಿನಿಮಾ ಬಿಡುಗಡೆಯಾಗುತ್ತಿದೆ. ‘ರೆಡ್’ ಎನ್ನುವ ಸಿನಿಮಾ ಚಿತ್ರೀಕರಣ ಆಗುತ್ತಿದೆ. ಒಟ್ಟಾರೆ ಇದೇ ನನ್ನ ಜಗತ್ತು ಎಂದೇ ಭಾವಿಸಿದ್ದೇನೆ.

★ *ಅನಿಶ್ಚತತೆ ಕಾರಣಕ್ಕೆ ಪಶ್ಚಾತ್ತಾಪ ಪಟ್ಟಿದ್ದು ಇದೆಯಾ?*

ಈಗ ಮಾಡುತ್ತಿರುವುದು ಮನದ ತುಡಿತ. ಈ ಮಾಧ್ಯಮದ ಆಕರ್ಷಣೆ ಇತ್ತು. ಜನರನ್ನು ರಂಜಿಸುವ ಕೆಲಸ ಮಾಡಬೇಕು ಎನ್ನುವ ಬಯಕೆ ಇತ್ತು. ಅನಿಶ್ಚಿತ ಆದಾಯ ಇದ್ದರೂ ನನಗೆ ತೊಂದರೆ ಅನ್ನಿಸಲಿಲ್ಲ. ಅಷ್ಟಕ್ಕೂ ಅನಿವಾರ್ಯ ಜವಾಬ್ದಾರಿಗಳು ಇರಲಿಲ್ಲ. ಹೆತ್ತವರು ಮತ್ತು ನನ್ನ ತಮ್ಮ ತುಂಬಾ ಬೆಂಬಲಿಸಿದರು. ಏನನ್ನೂ ಅಪೇಕ್ಷೆ ಪಡಲಿಲ್ಲ. ನಾನು ಬಯಸಿದ್ದಕ್ಕಿಂತ ಹೆಚ್ಚಿನ ಸ್ಥಾನ ನನಗೆ ದಕ್ಕಿದೆ. ನಾನೆಂದೂ ತೆರೆಯಲ್ಲಿ ನಾಯಕ ಆಗಬೇಕು ಎಂದು ಬಂದಿರಲಿಲ್ಲ. ಪುಟ್ಟ ಪಾತ್ರವಾದರೂ ಅಚ್ಚುಕಟ್ಟಾಗಿ ಮಾಡಬೇಕು ಎನ್ನುವ ಮನೋಧರ್ಮ ನನ್ನದು. ಬಯಕೆಗಿಂತ ಹೆಚ್ಚಿನ ಸ್ಥಾನ ಸಿಕ್ಕಿದೆ. ಅದು ನನಗೆ ತುಂಬಾ ಸಂತೋಷವನ್ನು ಉಂಟು ಮಾಡಿದೆ. ಅದಕ್ಕೆ ಖುಷಿಯೇ ಹೊರತು ಪಶ್ಚಾತ್ತಾಪ ಇಲ್ಲವೇ ಇಲ್ಲ.

★ *ನೀವೇನೋ ಕನ್ನಡ ಮೇಷ್ಟ್ರು ಆಗಿದ್ದೀರಂತೆ...*

ವಾಟ್ಸ್‌ಆ್ಯಪ್‌ನಲ್ಲಿ ಕನ್ನಡೇತರರಿಗೆ ಕನ್ನಡವನ್ನು ಕಲಿಸುತ್ತಿದ್ದೇವೆ. ಕನ್ನಡ ಕಲಿಸಲು ಒಂದು ತಂಡ ರಚಿಸಿಕೊಂಡಿದ್ದೇವೆ. ಅದರಲ್ಲಿ ಹತ್ತು ಜನ ಕೆಲಸ ಮಾಡುತ್ತಾರೆ. ಸುಮಾರು 600 ಜನರಿಗೆ ವ್ಯವಹಾರಿಕ ಕನ್ನಡವನ್ನು ಕಲಿಸಿದ್ದೇವೆ. ಅಲ್ಲದೇ ‘ಲಾಲ್‌ಬಾಗ್’ ಹಾಸ್ಯ ಕಾರ್ಯಕ್ರಮವನ್ನು ರಾಜ್ಯ ವ್ಯಾಪಿ ನೀಡುತ್ತಿದ್ದೇವೆ.

■ **ರಾಘವೇಂದ್ರ**